ವಾರದಿಂದ ನನ್ನ ಬಳಿಗೆ ಬಂದಿಲ್ಲ.'

'ರಾಮನನ್ನು ಕಾಡಿಗೆ ಕಳುಹಿಸುವ ಹಟವನ್ನು ಬಿಟ್ಟುಬಿಡು. ಅವನಿಲ್ಲದೆ ನಾನು ಬದುಕಿರಲಾರೆ. ದೇವಾಸುರ ಸಂಗ್ರಾಮದಲ್ಲಿ ನಾನು ಸಾಯಲು ನೀನು ಬಿಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಹಾಗಾಗಿದ್ದಲ್ಲಿ ಎರಡು ವರಗಳನ್ನು ಕೇಳಲು ನಿನಗೆ ನಾನು ಹೇಳುತ್ತಲೂ ಇರಲಿಲ್ಲ. ಇಂದು ನೀನು ನನ್ನನ್ನೂ ಈ ಪರಿಯಾಗಿ ಹಿಂಸಿಸುತ್ತಲೂ ಇರಲಿಲ್ಲ.'

ಆ ಪ್ರಸಂಗವನ್ನು ನೆನಪಿಸಿಕೊಂಡು ಕೈಕೇಯಿಯ ಹೃದಯ ಭಾರವಾಯಿತು. ದೇವಾಸುರ ಸಂಗ್ರಾಮದಲ್ಲಿ ಸಹಾಯಕ್ಕಾಗಿ ಇಂದ್ರದೇವ ದಶರಥನನ್ನು ಕರೆಸಿಕೊಂಡಿದ್ದ. ಯುದ್ಧಕೌಶಲ ತಿಳಿದಿದ್ದ ಕಾರಣ ಕೈಕೇಯಿ ಕೂಡ ಜೊತೆಯಲ್ಲಿ ಹೋಗಿದ್ದಳು. ಅವಳ ಬಳಿ ವಜ್ರಶಕ್ತಿ ಇತ್ತು. ಒಮ್ಮೆ ಮಹರ್ಷಿ ದುರ್ವಾಸಮುನಿ ಅಶ್ವಪತಿಯ ಅತಿಥಿಯಾಗಿದ್ದರು. ಕೈಕೇಯಿ ಶ್ರದ್ಧಾಭಾವದಿಂದ ಅವರ ಸೇವೆ ಮಾಡಿದ್ದಳು. ಆಗ ಪ್ರಸನ್ನರಾದ ದುರ್ವಾಸರು ಕೈಕೇಯಿಯ ಒಂದು ಕೈಯಲ್ಲಿ ವಜ್ರಶಕ್ತಿಯನ್ನು ತುಂಬಿದ್ದರು. ದಶರಥ ಮತ್ತು ಶಂಬಾಸುರರ ಮಧ್ಯೆ ಯುದ್ಧ ನಡೆಯುತ್ತಿತ್ತು. ಆ ಸಮಯದಲ್ಲಿ ದಶರಥನ ರಥದ ಕೀಲು ಮುರಿಯಿತು. ರಥ ಅಲುಗಾಡತೊಡಗಿತು. ಆಗ ಕೂಡಲೇ ಕೈಕೇಯಿ ಕೀಲಿನ ಜಾಗದಲ್ಲಿ ತನ್ನ ವಜ್ರಶಕ್ತಿಯ ಕೈ ಬೆರಳನ್ನು ಇಟ್ಟು ದಶರಥನ ಪ್ರಾಣ ಉಳಿಸಿದ್ದಳು. ಉಪಕೃತವಾದ ದಶರಥ ತನ್ನ ಪ್ರಾಣರಕ್ಷಣೆ ಮಾಡಿದ್ದಕ್ಕಾಗಿ ಎರಡು ವರಗಳನ್ನು ಕೇಳುವಂತೆ ಹೇಳಿದ್ದನು. ಆ ಹೊತ್ತಿನಲ್ಲಿ ಸಂಪೂರ್ಣ ತೃಪ್ತಳಾಗಿದ್ದ ಕೈಕೇಯಿ 'ಮತ್ತೆಂದಾದರೂ ವರಗಳನ್ನು ಕೇಳಿಕೊಳ್ಳುವೆ' ಎಂದಿದ್ದಳು.

'ವರದಾನದ ಬಗ್ಗೆ ನಾನು ಎಂದೂ ಗಮನಹರಿಸಲೇ ಇಲ್ಲ. ನಾನು ಮತ್ತು ನೀವು ಬೇರೆ ಬೇರೆ ಎಂದು ನನಗೆ ಎಂದಿಗೂ ಅನಿಸಿರಲೇ ಇಲ್ಲ. ಹಾಗಾಗಿ ಪ್ರತ್ಯೇಕವಾಗಿ ಬೇಡಿಕೆ ಇಡುವ ಔಚಿತ್ಯವೇ ಇಲ್ಲ. ಎರಡು ವರಗಳ ವಿಷಯವನ್ನು ನಾನಂತೂ ಮರೆತೇಬಿಟ್ಟಿರುವೆ. ಆದರೆ ನೀವು ಮಾತ್ರ ನನಗೆ ನೀಡಿರುವ ಎರಡು ವರ ಹಾಗೂ ನನ್ನ ತಂದೆಗೆ ಮಾಡಿರುವ ವಾಗ್ದಾನವನ್ನು ನಿಮ್ಮ ಅಂತರ್ಯದಿಂದ ತ್ಯಜಿಸಲಾರದಾದಿರಿ. ಆದುದರಿಂದಲೇ ಈ ಪ್ರಕರಣವನ್ನು ನನ್ನಿಂದ ಗುಪ್ತವಾಗಿರಿಸಿಬಿಟ್ಟಿರಿ. ಭರತನನ್ನು ಕರೆಸಿಕೊಳ್ಳಲಿಲ್ಲ. ಉತ್ತರಾಧಿಕಾರಿ ಮಾಡಬೇಕೆಂಬ ಬಗ್ಗೆ ನಾನು ಎಂದೂ ವಿಚಾರ ಮಾಡಲೇ ಇಲ್ಲ. ಭರತನು ಸಹ ರಾಮನನ್ನೇ ಉತ್ತರಾಧಿಕಾರಿ ಎಂದು ಒಪ್ಪಿದ್ದಾನೆ. ನೀವು ಮಾತ್ರ ನಿಮ್ಮ ವಚನದ ಬಲೆಯಲ್ಲಿ ಸಿಲುಕಿ ಎಷ್ಟೊಂದು ಒದ್ದಾಡುತ್ತಿದ್ದೀರಿ ಎಂದರೆ, ನನ್ನನ್ನೂ ಅರ್ಥ ಮಾಡಿಕೊಳ್ಳಲಿಲ್ಲ, ಭರತನನ್ನೂ ಅರ್ಥ ಮಾಡಿಕೊಳ್ಳಲಿಲ್ಲ. ಆತ ಭ್ರಾತೃಪ್ರೇಮಿ, ಸ್ವಚಾರಿತ್ರ್ಯ ಕರ್ತವ್ಯನಿಷ್ಠನಿದ್ದಾನೆ. ಅವನು ಎಂದಿಗೂ ರಾಜನಾಗುವುದಿಲ್ಲ. ಆದರೆ ನೀವು ಮಾತ್ರ ಅವನನ್ನು ಸಂದೇಹದಿಂದ ನೋಡಿದಿರಿ. ಈ ಶೋಕದಿಂದ ಖಂಡಿತವಾಗಿಯೂ ಜೀವನಪರ್ಯಂತ ಆತ ಹೊರಬರಲಾರ. ನೀವು ಪರಿಸ್ಥಿತಿಯನ್ನು ಇಷ್ಟೊಂದು ಜಟಿಲ



ಮಾಡಿಬಿಟ್ಟಿದ್ದೀರಿ.'

'ನನ್ನ ಅಪರಾಧವನ್ನು ಸ್ವೀಕರಿಸುತ್ತೇನೆ ದೇವಿ. ನಾನು ಭರತನನ್ನು ಒಪ್ಪಿಸುತ್ತೇನೆ. ನನ್ನ ಮಾತನ್ನು ಆತ ಎಂದಿಗೂ ನಿರಾಕರಿಸಲಾರ. ಭರತನ ರಾಜ್ಯಾಭಿಷೇಕ ನಡೆಯುತ್ತದೆ. ಈಗ ನಡೆದಿದ್ದೆಲ್ಲವೂ ನಮ್ಮಿಬ್ಬರ ನಡುವೆಯೇ ಇರಲಿ. ನಾನು ನನ್ನ ನಿರ್ಧಾರವನ್ನು ಬದಲಿಸಿದ್ದೇನೆ ಎಂದೇ ಎಲ್ಲರೂ ಭಾವಿಸುತ್ತಾರೆ. ಈಗ ನೀನು ಪ್ರಸನ್ನಳಾಗು. ನಾನು ನಿನ್ನ ಒಂದು ಮಾತನ್ನು ನಡೆಸಿಕೊಟ್ಟಿದ್ದೇನೆ. ಈಗ ನನ್ನದೂ ಒಂದು ಮಾತನ್ನು ಕೇಳು. ರಾಮನನ್ನು ದಂಡಕಾರಣ್ಯಕ್ಕೆ ಕಳುಹಿಸುವ ನಿನ್ನ ನಿರ್ಧಾರ ಬಿಡು.'

'ಕಳಿಸುತ್ತಿರಲಿಲ್ಲ. ನೀವು ನನ್ನಿಂದ ಈ ಪ್ರಕರಣವನ್ನು ಮುಚ್ಚಿಡದೆ ಇರುತ್ತಿದ್ದರೆ. ನೀವು ನನ್ನ ಸ್ವಾಭಿಮಾನವನ್ನು ನಾಶಮಾಡಿದಿರಿ. ನಾನು ನನ್ನದೇ ದೃಷ್ಟಿಯಲ್ಲಿ ಅತ್ಯಂತ ಹೀನ, ಅಸಹಾಯಕಳಾಗಿಬಿಟ್ಟಿದ್ದೇನೆ. ರಘುಕುಲ ರೀತಿ ಸದಾ ಚಿರಾಯು, ಪ್ರಾಣ ಅಳಿದರು ವಚನ ಉಳಿಯಲಿ ಎಂಬ ಯುಕ್ತಿಯನ್ನು ನಾನು ಕೇಳಿದ್ದೇನೆ. ಇದು ರಘುವಂಶದ ಗೌರವ ಗಾಥೆ. ಆದರೆ ನೀವು ನಿಮ್ಮ ವಚನಬದ್ಧತೆಯಿಂದ ಎಷ್ಟು ಭಯಭೀತರಾಗಿಬಿಟ್ಟಿದ್ದೀರಿ ಎಂದರೆ ಒಂದು ಷಡ್ಯಂತ್ರವನ್ನೇ ರೂಪಿಸಿದಿರಿ.'

'ನನ್ನ ಅಪರಾಧವನ್ನು ಖಂಡಿತಾ ಸ್ವೀಕರಿಸಿದ್ದೇನೆ. ಸರಿ, ರಾಮನನ್ನು ಕಾಡಿಗೆ ಕಳುಹಿಸುವುದೇ ಆದಲ್ಲಿ ಅಲ್ಪಕಾಲಕ್ಕೆ ಒಪ್ಪಿಗೆ ನೀಡು. ಅಯೋಧ್ಯೆಯ ಗಡಿಯ ಹೊರಗೆ ಸಮೀಪದಲ್ಲಿಯೇ ಆತ ಇರುವ ಹಾಗೆ ವ್ಯವಸ್ಥೆ ಮಾಡಿಸುತ್ತೇನೆ.'

'ನಾನು ಕೇಳಬೇಕಾದ್ದನ್ನು ಕೇಳಿ ಆಗಿದೆ. ಅದನ್ನು ಪೂರ್ಣಗೊಳಿಸುವ ಅಥವಾ ಬಿಡುವ ಕೆಲಸ ನಿಮಗೆ ಸೇರಿದ್ದು.'

'ಹದಿನಾಲ್ಕು ವರ್ಷ? ಯಾವುದೇ ರಾಜ ಹದಿನಾಲ್ಕು ವರ್ಷ ರಾಜಸಿಂಹಾಸನದಿಂದ ದೂರ ಉಳಿದರೆ ಆತ ನಿಯಮಾನುಸಾರವಾಗಿ ರಾಜನಾಗುವ ಅಧಿಕಾರವನ್ನು ಕಳೆದುಕೊಳ್ಳುತ್ತಾನೆ. ರಾಜನಾಗುವ ಅವಕಾಶದಿಂದ ರಾಮನನ್ನು ವಂಚಿಸಿ ನೀನು ಅಯೋಧ್ಯೆಯ ಭವಿಷ್ಯವನ್ನೇ ನಾಶ ಮಾಡುತ್ತಿರುವೆ.'

'ನನಗೆ ಅಗೌರವವಾಗಿದೆ. ಇದು ನನ್ನ ಪ್ರತೀಕಾರ.'

'ಹದಿನಾಲ್ಕು ವರ್ಷ ಆತ ತಪಸ್ವಿಯ ವೇಷದಲ್ಲಿ ಕಳೆಯಬೇಕಾಗುತ್ತದೆ. ಇಷ್ಟೊಂದು ನಿಷ್ಠುರಳಾಗಬೇಡ ದೇವಿ. ಆ ರಾಮ ಅತ್ಯಂತ ಸುಕುಮಾರ. ಅಂತಹ ಜೀವನ ಅವನಿಂದ ಸಾಧ್ಯವಾಗಲಾರದು.'

ಕೈಕೇಯಿ ಮೌನಕ್ಕೆ ಜಾರಿದಳು. ಮಾತಿಗೆ ಇನ್ನೂ ಅರ್ಥವಿಲ್ಲ. ದಕ್ಷಿಣದಲ್ಲಿ ರಾಕ್ಷಸ ಸಂಸ್ಕೃತಿ ನೆಲೆಯೂರುತ್ತಿದೆ. ಸಾಧು–ಸಂತ, ತಪಸ್ವಿ, ಆದಿವಾಸಿಗಳಿಗೆ ಆರ್ಯಸಂಸ್ಕೃತಿಯನ್ನು ಕಲಿಸುವ ಮೂಲಕ ತಮ್ಮ ಸಮುದಾಯವನ್ನು ವೃದ್ಧಿಸಿಕೊಳ್ಳುತ್ತಿದ್ದಾರೆ. ಹಾಗಾಗಿ ಸಾಧುಸಂತರಿಗೆ ಹಾನಿಯುಂಟು ಮಾಡುತ್ತಿದ್ದಾರೆ. ರಾಮ ತಪಸ್ವಿ ವೇಷದಲ್ಲಿದ್ದರೆ ರಾಕ್ಷಸರು ತಮ್ಮ ಉದ್ದೇಶದ ಈಡೇರಿಕೆಯ ಸಲುವಾಗಿ ರಾಮನ ಬಳಿಗೆ ಬರುತ್ತಾರೆ. ಆಗ ರಾಮನಿಗೆ ಅವರನ್ನು ನಾಶಗೊಳಿಸುವ ಸುಸಂದರ್ಭ ಒದಗುತ್ತದೆ. ಅದರಿಂದ ರಾಮ ಲೋಕ ಕಲ್ಯಾಣಕ್ಕಾಗಿ ತಾಪಸಿ ವೇಷಧಾರಣೆ ಮಾಡಬೇಕಾಗುತ್ತದೆ.

'ನೀನು ಪಾಪಿಷ್ಠೆ ಎನಿಸಿಕೊಳ್ಳುವೆ. ಕುಲಕಂಟಕಿಯಾಗುವೆ.'

ಕೈಕೇಯಿ ಹೇಳುವುದಾದರೂ ಏನಿತ್ತು? ರಾಮ ವನವಾಸಕ್ಕೆ ಹೋಗಲಿಲ್ಲವೆಂದಾದರೆ ಅವತಾರವೆತ್ತುವ ಅವನ ಧ್ಯೇಯ ಈಡೇರಲಾರದು. ಅವತಾರವನ್ನು ಒಪ್ಪಿದ್ದೇ ಆದಲ್ಲಿ ಅಪಕೀರ್ತಿಯನ್ನು ಸಹಿಸಿಕೊಳ್ಳುತ್ತೇನೆ. ರಾಮ ನನಗೆ ವಚನ ನೀಡಿದ್ದಾನೆ. ಅವನ ಮನೋರಥ ಪೂರ್ಣವಾಗಲಿ. ಅದಕ್ಕಾಗಿ ನಾನು ಸಾಧನವಾಗುತ್ತೇನೆ. ನಿಮಗೆ ವಚನವನ್ನು ಈಡೇರಿಸುವುದು ತಿಳಿದಿಲ್ಲ. ಇದು ನನಗೆ ಚೆನ್ನಾಗಿ ತಿಳಿದಿದೆ.

'ಮುಂದೆ ಯಾರೂ ತಮ್ಮ ಪುತ್ರಿಯರಿಗೆ ಕೈಕೇಯಿ ಎಂದು ಹೆಸರಿಡುವುದಿಲ್ಲ.'

ಕೈಕೇಯಿ ಹೇಳುವುದಾದರೂ ಏನು? ಭರತನು ನನ್ನನ್ನು ದೂರ ಮಾಡುತ್ತಾನೆ. ಆದರೆ ನಾನು ರಾಮನಿಗೆ ವಚನ ನೀಡಿದ್ದೇನೆ.

ಕೈಕೇಯಿ ಮೌನವಹಿಸಿದಳು.

ದಶರಥ ಪರಿಪರಿಯಾಗಿ ವಿನಂತಿಸಿದ.

ಕೈಕೇಯಿ ಮೌನ.

ದಶರಥ ದ್ವೇಷ ಮತ್ತು ತಿರಸ್ಕಾರದಿಂದ ತಾನು ಹೇಳಬೇಕೆನಿಸಿದ್ದೆಲ್ಲವನ್ನೂ ಹೇಳತೊಡಗಿದ.

ಕೈಕೇಯಿ ಮೌನ.

ದಶರಥ ಶಾಪ ನೀಡಲಾರಂಭಿಸಿದ.

ಕೈಕೇಯಿ ಮೌನ.

ದಶರಥನ ಹೃದಯದ ವೇಗ ನಿಯಂತ್ರಣಕ್ಕೆ ಸಿಗಲಾರದಾಯಿತು.

ಅತ್ತ ಬೆಳಕು ಮೂಡತೊಡಗಿತ್ತು.

ಇತ್ತ ದಶರಥ ಪ್ರಜ್ಞಾಹೀನ ಸ್ಥಿತಿಗೆ ತಲುಪಿದ್ದ.

ಪ್ರತಿಕ್ರಿಯಿಸಿ: feedback@sudha.co.in